**ಪಿಡಬ್ಲೂಃ 1** **ಸಿ.ಎಂ.ಸಿ.ನಂ.412/2026**

**ಸಾಕ್ಷಿಯನ್ನು ಕರೆಯಿಸಿ ದಿನಾಂಕ 31-07-2026 ರಂದು ಪ್ರಮಾಣ ವಚನ ಭೋದಿಸಲಾಯಿತು.**

ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳೆಲ್ಲಾ ಸತ್ಯ ಹಾಗೂ ಸಹಿ ನನ್ನದೇ ಆಗಿರುತ್ತದೆ..

**ಮುಖ್ಯ ವಿಚಾರಣೆಃ ಶ್ರೀ.ಎಂ ಜಿ ಎನ್ ಅರ್ಜಿದಾರರ ಪರ ವಕೀಲರಿಂದಃ**

ನಾನು ಈಗಾಗಲೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಅವುಗಳನ್ನು ನಾನು ನೋಡಿ ಗುರುತಿಸಿದ್ದು , ನಂತರ ಈ ಕೆಳಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು.

| | | |
|---|---|---|
| **ನಿಪಿ-1** | : | ಅಲಭ್ಯ ಪ್ರಮಾಣ ಪತ್ರ |
| **ನಿಪಿ-2** | : | ವಂಶವೃಕ್ಷದ ದೃಢೀಕರಣ ಪ್ರತಿ |
| **ನಿಪಿ-3** | : | ಪತ್ರಿಕಾ ಪ್ರಕಟಣೆ |
| **ನಿಪಿ-4 ರಿಂದ ನಿಪಿ-8** | : | 5 ನೋಟರೀಕೃತ ಆಧಾರ್ ಕಾರ್ಡ್ ಗಳ ಪ್ರತಿಗಳು |

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮೂಲ ಆಧಾರ್ ಕಾರ್ಡ್ ನ ಪ್ರತಿಯನ್ನು ಹಾಜರ್ ಪಡಿಸಲಾಯಿತು, ಅದನ್ನು ನೋಟರೀಕೃತ ಪ್ರತಿಯೊಂದಿಗೆ ಪರಿಶೀಲನೆ ಮಾಡಿ ಈ ಮೇಲಿನಂತೆ ನೋಟರೀಕೃತ ಪ್ರತಿಗಳನ್ನು ನಿಶಾನೆಗೊಳಿಸಲಾಯಿತು. ಮೂಲ ದಾಖಲಾತಿಯನ್ನು ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಲು ಕೋರಿಕೆ.

**ಎದುರುದಾರರು ಏಕಪಕ್ಷೀಯರು ಆದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.**

**ಮರು ವಿಚಾರಣೆ ಇಲ್ಲಃ-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)** **ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.